(ಇಂದು ದಿನಾಂಕ:26-03-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀ ಸವಾಲುಃ ಎದುರುದಾರ ನಂ.2 ರವರ ಪರ ಶ್ರೀ ಎಸ್ ಎನ್ ಎಮ್ ವಕೀಲರಿಂದ.</u>**

1. ನಾನು ಹಾಕಿದ ದಾಖಲೆ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ದಾಖಲೆ ಅಪಘಾತ ಆದ ಬಗ್ಗೆ ಪಂಚನಾಮೆ ಇರುತ್ತದೆ. ಪಂಚನಾಮೆಗೆ ಬಂದ ಪಂಚರ ಹೆಸರು ನನಗೆ ಗೊತ್ತಿಲ್ಲ. ಪಂಚನಾಮೆ ಯಾವ ದಿನಾಂಕದಂದು ಆಯಿತು ನನಗೆ ಮಾಹಿತಿ ಇಲ್ಲ. ಸದರಿ ವಾಹನವನ್ನು ಸಿಸಿ ಕ್ಯಾಮರಾ ಮುಖಾಂತರ ನೋಡಿ ಜಪ್ತು ಮಾಡಿರುತ್ತಾರೆ. ಸಿಸಿ ಕ್ಯಾಮರಾ ವಿಡಿಯೋ ನಾನು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ. ಅಶೋಕ ಲೇಲ್ಯಾಂಡ್ ಕಂಪನಿಯ ವಾಹನ ಸಂಖ್ಯೆ ಕೆಎ 37 ಬಿ 5471

ನೇದ್ದರ ವಾಹನದಿಂದ ಅಪಘಾತ ಆಗದೇ ಇದ್ದರೂ ಅದನ್ನು ಪ್ರಕರಣಕ್ಕೆ ಅನುಕೂಲವಾಗಲೇಂದು ಸುಳ್ಳಾಗಿ ಜಪ್ತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಹನವನ್ನು ನಾವು ಮತ್ತು ಪೋಲೀಸರು ಶಾಮಿಲಾಗಿ ಸುಳ್ಳಾಗಿ ವಾಹನವನ್ನು ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಪಂಚರಿಗೂ ಸಹ ಯಾವುದೇ ಮಾಹಿತಿ ಇಲ್ಲ, ಸಹಿ ಮಾಡು ಎಂದಿದ್ದಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಪಂಚರ ಸಾಕ್ಷಿ ಮಾಡಿಸಿಲ್ಲ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು.